# ಮೈಸೂರು ಮಹಾನಗರ ಪಾಲಿಕೆ

ಜವಹರ್‌ಲಾಲ್ ನೆಹರು ರಾಷ್ಟ್ರೀಯ ಪುನರುಜ್ಜೀವನ ಯೋಜನೆಯ ಸಭೆಯ ನಡವಳಿ, ಮೈಸೂರು.

ಸಭೆಯ ದಿನಾಂಕ : 19-08-2009.

ಸಭೆಯ ವೇಳೆ : ಬೆಳಿಗ್ಗೆ 9.00 ಕ್ಕೆ

ಅಧ್ಯಕ್ಷತೆ : ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ನರ್ಮ್ ವಿಶೇಷ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

| ಕ್ರ. ಸಂ. | ಹಾಜರಿದ್ದವರು | ಕ್ರ ಸಂ. | ಹಾಜರಿದ್ದವರು |
|---|---|---|---|
| 1. | ಶ್ರೀ ಪುರುಷೋತ್ತಮ, ಮಹಾಪೌರರು, ಮೈನಪಾ | 20. | ಶ್ರೀ ಎ.ಎನ್.ಪ್ರಸಾದ್, ಸಕಾಅ, ನರ್ಮ್ |
| 2. | ಶ್ರೀಮತಿ ಶಾರದಮ್ಮ, ಉಪ ಮಹಾಪೌರರು, ಮೈನಪಾ | 21. | ಶ್ರೀ ಎಂ.ಆರ್.ಪಾಂಡುರಂಗ, ಸಕಾಅ, ಮೂಡಾ |
| 3. | ಶ್ರೀ ಕೆ.ಎಸ್. ರಾಯ್ಕರ್, ಆಯುಕ್ತರು, ಮೈನಪಾ | 22. | ಶ್ರೀ ಎಂ.ವಿ. ಶ್ರೀಧರ್, ಸಕಾಅ, ನರ್ಮ್ |
| 4. | ಶ್ರೀ ಜಯಣ್ಣ, ಆಯುಕ್ತರು, ಮೂಡಾ | 23. | ಶ್ರೀ ರಾಮಕೃಷ್ಣ ಸಕಾಅ, ನರ್ಮ್ |
| 5. | ಶ್ರೀ ಬಿ.ಕೆ. ಸುರೇಶ್‌ಬಾಬು, ಅಇಂ (ನರ್ಮ್), ಮೈನಪಾ | 24. | ಶ್ರೀ ಎಂ.ಬಸವರಾಜು, ಸಕಾಅ, ನರ್ಮ್ |
| 6. | ಶ್ರೀ ಮಹೇಶ್, ಅಇಂ, ಮೈನಪಾ | 25. | ಬಿ.ಸಿ.ಕುಮಾರ್, ಸಕಾಅ, ಕೆ.ಎಸ್.ಆರ್.ಟಿ.ಸಿ |
| 7. | ಶ್ರೀ ಕೆ.ಪಿ. ಶಿವಕುಮಾರ್, ಅಇಂ, ಮೈಸೂರು ನಗರಾಭಿವೃದ್ದಿ ಪ್ರಾಧಿಕಾರ | 26. | ಶ್ರೀ ಹೆಚ್.ವಿ.ಶ್ರೀಧರ್‌ಮೂರ್ತಿ, ಸಕಾಅ, ನರ್ಮ್ |
| 8. | ಶ್ರೀ ಎಸ್.ಟಿ.ದೇವರಾಜ್, ಉಪ ಆಯುಕ್ತರು, ಮೈನಪಾ | 27. | ಶ್ರೀ ಎಂ.ಆರ್. ರಾಮಚಂದ್ರಯ್ಯ, ಸಕಾಅ, ಕೆ.ಯು.ಡಬ್ಲ್ಯೂಎಸ್ & ಡಿಬಿ |
| 9. | ಶ್ರೀ ಹೊನ್ನೇಗೌಡ, ಕಾಅ, ಕೆ.ಯು.ಡಬ್ಲ್ಯೂಎಸ್ & ಡಿಬಿ | 28. | ಶ್ರೀ ಎಂ.ನಂಜುಂಡಸ್ವಾಮಿ, ಸಸಾಅ, ಮೈನಪಾ |
| 10. | ಶ್ರೀ ಎಸ್.ವಿ. ಕಿಶೋರ್‌ಕುಮಾರ್, ಕಾಅ, ಕೆ.ಎಸ್.ಸಿ.ಬಿ | 29. | ಶ್ರೀ ಪಿ.ವಿ.ರಾಮದಾಸ್, ಪ್ರಾಜೆಕ್ಟ್ ಕೋ-ಆರ್ಡಿನೇಟರ್. |
| 11. | ಶ್ರೀಮತಿ ಸುಧಾ ಎಂ.ವಿ. ಯೋಜನಾ ನಿರ್ದೇಶಕರು, ಡಿ.ಯು.ಡಿ.ಸಿ. ನಗರಾಭಿವೃದ್ಧಿ ಶಾಖೆ. | 30. | ಶ್ರೀ ಎ. ಘೋಷ್, ಚೀಫ್(ಒ&ಎಂ), ಜಸ್ಕೋ |
| 12. | ಶ್ರೀ ಎಸ್. ಸತೀಶ್(ಸಂದೇಶಸ್ವಾಮಿ), ನಗರಪಾಲಿಕೆ ಸದಸ್ಯರು, ವಾರ್ಡ್ ನಂ.62 | 31. | ಶ್ರೀ ಎಂ. ಲಕ್ಷ್ಮಣ್, ಸಂಚಾಲಕರು, ಎ.ಸಿ.ಐ.ಸಿ.ಎಂ. |
| 13. | ಶ್ರೀ ಅಯೂಬ್‌ಖಾನ್, ನಗರಪಾಲಿಕೆ ಸದಸ್ಯರು, ವಾರ್ಡ್ ನಂ.52 | 32. | ಶ್ರೀ ಡಿ. ಮಲ್ಲಿಕಾರ್ಜುನ, ಪ್ರಾಜೆಕ್ಟ್ ಮ್ಯಾನೇಜರ್, ಎನ್.ಸಿ.ಸಿ.ಎಲ್ |
| 14. | ಶ್ರೀ ಬಿ.ಎಲ್ ಭೈರಪ್ಪ, ನಗರಪಾಲಿಕೆ ಸದಸ್ಯರು, ವಾರ್ಡ್ ನಂ.12 | 33. | ಶ್ರೀ ಆನಂದ್ ಫಡಟೋನೆ, ಪ್ರಾಜೆಕ್ಟ್ ಮ್ಯಾನೇಜರ್, ಮೆಕಾಟ್ರೋನಿಕ್ಸ್, ಪುಣೆ |
| 15. | ಶ್ರೀ ನಾಗೇಂದ್ರ, ನಗರಪಾಲಿಕೆ ಸದಸ್ಯರು, ವಾರ್ಡ್ ನಂ.08 | 34. | ಶ್ರೀ ಉಮರ್ ಫರೂಕ್ ಅಲಿ. ಎ.ಎಂ, ಕನ್ಸಸ್ಟ್ರಕ್ಷನ್ಸ್ ಇಂಜಿನಿಯರ್, ಸ್ಟೂಪ್ ಕನ್ಸಲ್ಟೆಂಟ್, ಪ್ರೈ.ಲಿ |
| 16. | ಶ್ರೀ ಎಂ.ಎಲ್.ಸೋಮಶೇಖರ್, ನಗರಪಾಲಿಕೆ ಸದಸ್ಯರು, ವಾರ್ಡ್ ನಂ.29. | 35. | ಇಷ್ರಾದ್ ಹೆಚ್. ಖಾನ್, ಆರ್ಕಿಟೆಕ್, ಡಿಸೈನ್ ಸಿಟಿ ಕನ್ಸಸ್ಟ್ರಕ್ಷನ್ |
| 17. | ಶ್ರೀ ಡಿ. ಪದ್ಮನಾಭ್, ಅಧ್ಯಕ್ಷರು, ಜಿಲ್ಲಾ ಪ್ಲಾನಿಂಗ್ ಕಮಿಟಿ | 36. | ಶ್ರೀ ಶರತ್ ಹೆಚ್.ಎಸ್, ಐ.ಟಿ. ಆಫಿಸರ್, ಜೆಎನ್‌ನರ್ಮ್ |
| 18. | ಶ್ರೀ ಪಿ.ವಿ.ವಿ.ಸತ್ಯನಾರಾಯಣ, ವಿಭಾಗೀಯ ಇಂಜಿನಿಯರ್, ಸೌತ್ ವೆಸ್ಟ್ ರೈಲ್ವೆ, ಮೈಸೂರು. | 37. | ಶ್ರೀಮತಿ ಶೋಭಾ ಭಟ್, ಹೆಚ್.ಆರ್.ಡಿ.ಒ, ಜೆಎನ್‌ನರ್ಮ್ |
| 19. | ಶ್ರೀಮತಿ ಮಹದೇವಮ್ಮ, ನಗರಪಾಲಿಕೆ ಸದಸ್ಯರು, ವಾರ್ಡ್ ನಂ.50 | 38. | ಶ್ರೀ ಚಿದಂಬರ್ ಬಿ.ಎಸ್, ಪಿ.ಹೆಚ್.ಇ, ಜೆಎನ್‌ನರ್ಮ್ |

| | | |
|---|---|---|
| ಹಿಂದಿನ ಸಭೆಯ ದಿನಾಂಕ | : | 29/07/09 |
| ಮುಂದಿನ ಸಭೆಯ ದಿನಾಂಕ | : | 02/09/09 |
| ಮುಂದಿನ ಸಭೆಯ ವೇಳೆ | : | ಬೆಳಿಗ್ಗೆ 9.00 ಗಂಟೆಗೆ |
| ಮುಂದಿನ ಸಭೆಯ ಸ್ಥಳ | : | ಎಂ.ಸಿ.ಸಿ ಸಭೆಯ ಸಭಾಂಗಣ, ಮೈಸೂರು |
| ತಯಾರಿಸಿದವರು | : | ಶ್ರೀ ಬಿ.ಕೆ. ಸುರೇಶ್‌ಬಾಬು |
| ಕಳುಹಿಸಿರುವುದು | : | ಶ್ರೀ ಬಿ.ಕೆ. ಸುರೇಶ್‌ಬಾಬು |

ಟಿಪ್ಪಣಿ:

- ಎಲ್ಲರೂ ಸಭೆಯ ನಡವಳಿಯ ಪ್ರತಿಯನ್ನು ಮುಂದಿನ ಸಭೆಗೆ ತರಲು ಕೋರಲಾಗಿದೆ.
- ಸಭೆಯ ನಡವಳಿಕೆಗೆ ಪಾಲನಾ ವರದಿಯನ್ನು ಮುಂದಿನ ಸಭೆ ನಡೆಯುವ 2 ದಿವಸಗಳ ಮುಂಚಿತವಾಗಿ ಸಲ್ಲಿಸುವುದು.
- ಅನುಪಾಲನಾ ವರದಿಯನ್ನು ಅಧೀಕ್ಷಕ ಅಭಿಯಂತರರು, ಮೈಸೂರು ಮಹಾನಗರ ಪಾಲಿಕೆ ಹಾಗೂ ಸಮನ್ವಯಾಧಿಕಾರಿ, ನರ್ಮ್ ಯೋಜನೆ ಇವರಿಗೆ ಕಳುಹಿಸಿಕೊಟ್ಟು, ಈ ಅಧಿಕಾರಿಯು ವರದಿಯನ್ನು ಕ್ರೋಢಿಕರಿಸಿ, ಈ ಕೆಳಗೆ ಸಹಿ ಮಾಡಿರುವವರಿಗೆ ಒಂದು ದಿವಸ ಮುಂಚಿತವಾಗಿ ಪರಿಶೀಲನೆಗಾಗಿ ಮಂಡಿಸುವುದು.
- ನರ್ಮ್ ಯೋಜನೆಗೆ ಸಂಬಂಧಪಟ್ಟ ಎಲ್ಲಾ ಪತ್ರ ವ್ಯವಹಾರಗಳನ್ನು ಮೈಸೂರು ನಗರಪಾಲಿಕೆಗೆ ಕಳುಹಿಸುವುದು.

* * * * *

ಅಧೀಕ್ಷಕ ಅಭಿಯಂತರರು, ಮೈಸೂರು ನಗರಪಾಲಿಕೆ ಮೈಸೂರು, ಇವರು ಮಾನ್ಯ ಮಹಾಪೌರರು, ಮೈಸೂರು ನಗರ ಪಾಲಿಕೆ, ಮಾನ್ಯ ಉಪ ಮಹಾಪೌರರು, ಮೈಸೂರು ನಗರ ಪಾಲಿಕೆ ಹಾಗೂ ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಎಲ್ಲಾ ಅಧಿಕಾರಿಗಳನ್ನು ಹಾಗೂ ಎಲ್ಲಾ ಗುತ್ತಿಗೆದಾರರನ್ನು ಸ್ವಾಗತಿಸಿದರು.

ಪ್ರಾರಂಭದಲ್ಲಿ ವಿಶೇಷ ಅಧಿಕಾರಿಗಳು, ನರ್ಮ್ ಇವರು ಇನ್ನುಮುಂದೆ ಪ್ರಗತಿ ಪರಿಶೀಲನಾ ಸಭೆಗಳನ್ನು ಪ್ರತಿ ತಿಂಗಳ ಮೊದಲನೇ ವಾರದ ಬುಧವಾರದಂದು ಮತ್ತು 3ನೇ ವಾರದ ಬುಧವಾರದಂದು ನಡೆಸುವುದಾಗಿ ತಿಳಿಸಿದರು. ಪ್ರಗತಿ ಪರಿಶೀಲನಾ ಸಭೆಗೆ ಮಾಧ್ಯಮದ ಪ್ರತಿನಿಧಿಗಳು ಹಾಜರಾಗಬಹುದಾಗಿರುತ್ತದೆ. ಮತ್ತು ಸಾರ್ವಜನಿಕರು ಪ್ರತಿ ತಿಂಗಳ 3ನೇ ವಾರದ ಬುಧವಾರದಂದು ನಡೆಯುವ ಸಭೆಗೆ ಹಾಜರಾಗಬಹುದಾಗಿರುತ್ತದೆ ಎಂದು ತಿಳಿಸಿದರು.

ನರ್ಮ್ ಕಾಮಗಾರಿಗಳು ಯೋಜಿತ ಆಕ್ಷನ್ ಪ್ಲಾನ್ ಪ್ರಕಾರ ನಡೆಯುತ್ತಿದ್ದು, ಜುಲೈ 2009ರ ಅಂತ್ಯಕ್ಕೆ ರೂ. 117.67 ಕೋಟಿಗಳ ಎದುರಾಗಿ ರೂ. 118.97 ಕೋಟಿಗಳ ಪ್ರಗತಿಯನ್ನು ಸಾಧಿಸಲಾಗಿದ್ದು, ಎಲ್ಲಾ ನರ್ಮ್ ಕಾಮಗಾರಿಗಳನ್ನು ನಿಗಧಿತ ಅವಧಿಯಾದ ಡಿಸೆಂಬರ್ 2012ರೊಳಗೆ ಪೂರ್ಣಗೊಳಿಸುವುದಾಗಿ ವಿಶೇಷ ಅಧಿಕಾರಿಗಳು ತಿಳಿಸಿದರು.

ಕಾಮಗಾರಿವಾರು ಪ್ರಗತಿ ಪರಿಶೀಲನಾ ವಿವರಗಳು ಈ ರೀತಿ ಇರುತ್ತವೆ.

| ಕ್ರ. ಸಂ | ಯೋಜನೆಯ ಹೆಸರು | ಹಿಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳು/ವಿಮರ್ಶೆ | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| 1 | ಮೈಸೂರು ನಗರದಲ್ಲಿ ನೀರು ಸರಬರಾಜು ನೆಟ್‌ವರ್ಕ್‌ನ ರೀಮಾಡಲ್ಲಿಂಗ್, ಸಿಸ್ಟಮ್ ಆಟೋಮೇಷನ್ ಮತ್ತು ಸಮಗ್ರ ನಿರ್ವಹಣಾ ವ್ಯವಸ್ಥೆ ಒದಗಿಸುವ ಯೋಜನೆ: ಯೋಜನಾ ಅಂದಾಜು ಮೊತ್ತ ರೂ.65.56 ಕೋಟಿಗಳು<br>ಯೋಜನಾ ಮುಕ್ತಾಯ | 2009 ಜುಲೈ ತಿಂಗಳ ಅಂತ್ಯಕ್ಕೆ ನಿಗಧಿಪಡಿಸಿದ್ದ ಗುರಿಯಾದ ರೂ. 58.18 ಕೋಟಿಗಳ ಎದುರಾಗಿ ರೂ. 59.20 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು.<br>ಭೌತಿಕ ಪ್ರಗತಿಗೆ ಸಂಬಂಧಿಸಿದಂತೆ, ಕಾಮಗಾರಿಗೆ ಅಗತ್ಯವಿರುವ 54.17 | 2009 ಆಗಸ್ಟ್ ತಿಂಗಳ 15ಕ್ಕೆ ನಿಗಧಿಪಡಿಸಿದ್ದ ಗುರಿಯಾದ ರೂ. 59.14 ಕೋಟಿಗಳ ಎದುರಾಗಿ ರೂ. 60.85 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು.<br>ಭೌತಿಕ ಪ್ರಗತಿಗೆ ಸಂಬಂಧಿಸಿದಂತೆ, ಕಾಮಗಾರಿಗೆ ಅಗತ್ಯವಿರುವ 54.17 | |

| ಕ್ರ. ಸಂ | ಯೋಜನೆಯ ಹೆಸರು | ಹಿಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳು/ವಿಮರ್ಶೆ | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | ದಿನಾಂಕ:ಜನವರಿ-2010 | ಕಿ.ಮಿ ಉದ್ದದ ಎಂ.ಎಸ್ ಪೈಪುಗಳಲ್ಲಿ 54.17 ಕಿ.ಮೀ ಉದ್ದದ ಪೈಪುಗಳನ್ನು ಶೇಖರಿಸಲಾಗಿರುತ್ತದೆ. ಇವುಗಳಲ್ಲಿ 35.81 ಕಿ.ಮೀ ಉದ್ದದ ಪೈಪುಗಳನ್ನು ಅಳವಡಿಸಲಾಗಿದ್ದು, 53.25 ಕಿ.ಮೀ ಉದ್ದಕ್ಕೆ ಒಳಭಾಗದ ಲೈನಿಂಗ್ ಮತ್ತು 49.11 ಕಿ.ಮೀ ಉದ್ದಕ್ಕೆ ಹೊರಭಾಗದ ಲೈನಿಂಗ್ ಪೂರ್ಣಗೊಳಿಸಲಾಗಿದೆ ಹಾಗೂ 16.48 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿರುತ್ತದೆ<br><br>ಡಿಐ ಪೈಪುಗಳಿಗೆ ಸಂಬಂಧಿಸಿದಂತೆ, ಅಗತ್ಯವಿರುವ ಪೂರ್ಣ ಪ್ರಮಾಣದ 26.90 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಶೇಖರಿಸಲಾಗಿದ್ದು, 18.99 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಅಳವಡಿಸಲಾಗಿದೆ. ಹಾಗೂ 14.88 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿದೆ ಎಂದು ತಿಳಿಸಿದರು.<br>ಎಲ್ಲಾ 25 ಮೇಲ್ಮಟ್ಟದ ಶೇಖರಣಾ ಟ್ಯಾಂಕುಗಳ ಕಾಮಗಾರಿಯು ವಿವಿಧ ಹಂತಗಳ ಪ್ರಗತಿಯಲ್ಲಿದೆ. ಎಂದು ತಿಳಿಸಿದರು.<br>ಪೈಪ್‌ಲೈನ್‌ಗಳನ್ನು ಅಳವಡಿಸಿದ ನಂತರ ಮೇಲೆ ತುಂಬುವ ಮಣ್ಣನ್ನು ಸರಿಯಾಗಿ ಗಟ್ಟಿಯಾಗಿ ಕನ್ಸಾಲಿಟೆಡ್ ಮಾಡಿ, ರಸ್ತೆಯನ್ನು ಸರಿಯಾಗಿ ನಿರ್ವಹಣೆ ಮಾಡಲು ಮಾನ್ಯ ಆಯುಕ್ತರು ನಿರ್ದೇಶಿಸಿದರು.<br>ಮುಂಬರುವ, ದಸರಾ ಹಬ್ಬದ ಹಿನ್ನಲೆಯಲ್ಲಿ ನಗರದ ಭಾಗದಲ್ಲಿ ಪೈಪ್‌ಲೈನ್‌ಗಳನ್ನು ಅಳವಡಿಸುವ ಕಾಮಗಾರಿಗೆ ಹೆಚ್ಚಾಗಿ ಗಮನ ಹರಿಸುತ್ತಿರುವುದಾಗಿ ಕಾರ್ಯಪಾಲಕ ಇಂಜಿನಿಯರ್‌ರವರು ತಿಳಿಸಿದರು. ಕೆಲಸದ ಪ್ರಗತಿಯನ್ನು ಹೆಚ್ಚಿಸಿ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸುವಂತೆ ಸೂಚಿಸಲಾಯಿತು. | ಕಿ.ಮಿ ಉದ್ದದ ಎಂ.ಎಸ್ ಪೈಪುಗಳಲ್ಲಿ 54.17 ಕಿ.ಮೀ ಉದ್ದದ ಪೈಪುಗಳನ್ನು ಶೇಖರಿಸಲಾಗಿರುತ್ತದೆ. ಇವುಗಳಲ್ಲಿ 38.58 ಕಿ.ಮೀ ಉದ್ದದ ಪೈಪುಗಳನ್ನು ಅಳವಡಿಸಲಾಗಿದ್ದು, 54.17 ಕಿ.ಮೀ ಉದ್ದಕ್ಕೆ ಒಳಭಾಗದ ಲೈನಿಂಗ್ ಮತ್ತು 53.75 ಕಿ.ಮೀ ಉದ್ದಕ್ಕೆ ಹೊರಭಾಗದ ಲೈನಿಂಗ್ ಪೂರ್ಣಗೊಳಿಸಲಾಗಿದೆ ಹಾಗೂ 19.70 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿರುತ್ತದೆ<br><br>ಡಿಐ ಪೈಪುಗಳಿಗೆ ಸಂಬಂಧಿಸಿದಂತೆ, ಅಗತ್ಯವಿರುವ ಪೂರ್ಣ ಪ್ರಮಾಣದ 26.90 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಶೇಖರಿಸಲಾಗಿದ್ದು, 19.24 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಅಳವಡಿಸಲಾಗಿದೆ. ಹಾಗೂ 26.67 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿದೆ ಎಂದು ತಿಳಿಸಿದರು.<br>ಎಲ್ಲಾ 25 ಮೇಲ್ಮಟ್ಟದ ಶೇಖರಣಾ ಟ್ಯಾಂಕುಗಳ ಕಾಮಗಾರಿಯು ವಿವಿಧ ಹಂತಗಳ ಪ್ರಗತಿಯಲ್ಲಿದೆ. ಎಂದು ತಿಳಿಸಿದರು.<br><br>ಮುಂಬರುವ ದಸರಾ ಹಬ್ಬದ ಹಿನ್ನಲೆಯಲ್ಲಿ ನೀರು ಸರಬರಾಜು ಪೈಪ್‌ಲೈನ್ ಅಳವಡಿಕೆಗೆ ಅಗೆದಿರುವ ರಸ್ತೆಯನ್ನು ಸರಿ ಮಾಡಿ ಡಾಂಬರು ಸಹಿತ ದಿ: 10.09.2009ರೊಳಗೆ ಸುಸ್ಥಿತಿಯಲ್ಲಿಡಲು ಸೂಚಿಸಲಾಯಿತು.<br>ನಗರದ ಹೃದಯ ಭಾಗದಲ್ಲಿ 20 ಅಂಥ ರಸ್ತೆಗಳು ಇದ್ದು, ಅವುಗಳನ್ನು ದಿ: 10.09.2009ರೊಳಗೆ ಸರಿ ಮಾಡಿ ಸುಸ್ಥಿಯಲ್ಲಿಡುವುದಾಗಿ ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು.<br><br>ಸದರಿ ಕಾಮಗಾರಿಗಳನ್ನು ನಿರ್ವಹಿಸುತ್ತಿರುವ ಮೆ//ನಾಗಾರ್ಜುನ ಕನ್‌ಸ್ಟ್ರಕ್ಷನ್ಸ್ ಕಂಪನಿ ಇವರಿಗೆ ಈ ಬಗ್ಗೆ | |

| ಕ್ರ.ಸಂ. | ಯೋಜನೆಯ ಹೆಸರು | ಹಿಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳು/ವಿಮರ್ಶೆ | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | | ಸೂಕ್ತ ಕ್ರಮತೆಗೆದುಕೊಳ್ಳಲು ಸೂಚಿಸಲಾಯಿತು. ತಪ್ಪಿದ್ದಲ್ಲಿ ಕಂಪನಿ ವಿರುದ್ಧ ಅಗತ್ಯ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಲಾಯಿತು. | |
| 2 | ಸ್ಕಾಡಾ ಯೋಜನೆ: ಅಂದಾಜು ಮೊತ್ತ: ರೂ. 5.24 ಕೋಟಿ<br>Agency: M/s. Mechatronics<br>ಅವಧಿ: 9 ತಿಂಗಳು ಮುಕ್ತಾಯ ವಾಗಬೇಕಾದುದು : ಜುಲೈ-2009 | 9 ಫ್ಲೋ ಮೀಟರ್ ಅಳವಡಿಕೆ ಕಾಮಗಾರಿ ಪೂರ್ಣಗೊಂಡಿರುವುದಾಗಿ ಕಾರ್ಯಪಾಲಕ ಇಂಜಿನಿಯರ್‌ರವರು ತಿಳಿಸಿದರು. ರೇಡಿಯೋ ಅಳವಡಿಕೆ ಮತ್ತು ಟೆಲಿಮೆಟ್ರಿ ವ್ಯವಸ್ಥೆ ಪೂರ್ಣಗೊಂಡಿರುತ್ತದೆ. ಸ್ಕಾಡಾ ಉಪಕರಣಗಳು, ನೀರಿನ ಗುಣಮಟ್ಟ ಪರೀಕ್ಷಾ ಉಪಕರಣಗಳು, ಫ್ಲೋ ಮೀಟರ್ ಮತ್ತು ಆಕ್ಯುಯೇಟರ್‌ಗಳನ್ನು ಸಂಗ್ರಹಿಸಲಾಗಿದ್ದು, ಜೋಡಣೆ ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ತಿಳಿಸಿದರು. ಡಬ್ಲ್ಯೂಟಿ.ಪಿ ಕೆಲಸಗಳು ಪ್ರಗತಿಯಲ್ಲಿರುತ್ತವೆ.<br>ಫ್ಲೋ ಮೀಟರ್ ಜೋಡಣೆ ಕಾಮಗಾರಿಯನ್ನು ಮೇ, ಜೂನ್ ತಿಂಗಳಲ್ಲಿ ಬೇಸಿಗೆ ಹಿನ್ನಲೆಯಲ್ಲಿ ಕೈಗೆತ್ತಿಕೊಳ್ಳಲು ಸಾಧ್ಯವಾಗದಿಲ್ಲದಿರುವುದರಿಂದ ಕಾಮಗಾರಿಯನ್ನು ಪೂರ್ಣಗೊಳಿಸುವ ಅವಧಿಯನ್ನು ಆಗಸ್ಟ್‌ನಿಂದ ಸೆಪ್ಟೆಂಬರ್‌ವರೆಗೆ ಮುಂದೂಡಿರುವುದಾಗಿ ಕಾರ್ಯಪಾಲಕ ಇಂಜಿನಿಯರ್‌ರವರು ತಿಳಿಸಿದರು. | 9 ಫ್ಲೋ ಮೀಟರ್ ಅಳವಡಿಕೆ ಕಾಮಗಾರಿ ಪೂರ್ಣಗೊಂಡಿರುವುದಾಗಿ ಕಾರ್ಯಪಾಲಕ ಇಂಜಿನಿಯರ್‌ರವರು ತಿಳಿಸಿದರು. ರೇಡಿಯೋ ಅಳವಡಿಕೆ ಮತ್ತು ಟೆಲಿಮೆಟ್ರಿ ವ್ಯವಸ್ಥೆ ಪೂರ್ಣಗೊಂಡಿರುತ್ತದೆ. ಸ್ಕಾಡಾ ಉಪಕರಣಗಳು, ನೀರಿನ ಗುಣಮಟ್ಟ ಪರೀಕ್ಷಾ ಉಪಕರಣಗಳು, ಫ್ಲೋ ಮೀಟರ್ ಮತ್ತು ಆಕ್ಯುಯೇಟರ್‌ಗಳನ್ನು ಸಂಗ್ರಹಿಸಲಾಗಿದ್ದು, ಜೋಡಣೆ ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ತಿಳಿಸಿದರು. ಡಬ್ಲ್ಯೂಟಿ.ಪಿ ಕೆಲಸಗಳು ಪ್ರಗತಿಯಲ್ಲಿರುತ್ತವೆ. | |
| 3 | 24 x 7 ನೀರು ಸರಬರಾಜು<br>ಪಶ್ಚಿಮ ವಲಯ: ಅಂದಾಜುಮೊತ್ತ 56.07 ಕೋಟಿ ರೂ. ಸಿಎಸ್‌ಆರ್, ಕುವೆಂಪುನಗರ ಹೆಚ್.ಎಲ್.ಆರ್ ವಲಯದ ಭಾಗಶ: ವಲಯಗಳು ಮತ್ತು ಪೂರ್ವವಲಯ ಹೆಚ್.ಎಲ್.ಆರ್ ವಲಯದ ಭಾಗಶ: ಅಂದಾಜುಮೊತ್ತ 45.84 ಕೋಟಿ ರೂ. ಜರ್ಮನ್ ಪ್ರೆಸ್, ದೇವನೂರು, ಬಳ್ಳಾಲ್ ವೃತ್ತ ವಲಯಗಳು ಮತ್ತು ಹೆಚ್.ಎಲ್.ಆರ್ ವಲಯದ | ಪ್ರಾಥಮಿಕ ಕೆಲಸಗಳು ಚಾಲನೆಯಲ್ಲಿದ್ದು, ಅಧ್ಯಯನ ನಡೆಸಲಾಗುತ್ತಿದೆಯೆಂದು ಕಾರ್ಯಪಾಲಕ ಇಂಜಿನಿಯರ್‌ರವರು ತಿಳಿಸಿದರು. ಓ & ಎಂ ಪ್ಲಾನ್ ಅನುಮೋದಿತವಾಗಿರುತ್ತದೆ.<br>24 x 7 ನೀರು ಸರಬರಾಜು ವ್ಯವಸ್ಥೆಯನ್ನು ಮೈಸೂರು ನಗರ ಪಾಲಿಕೆ ಭಾಗಗಳಿಗೆ ಪ್ರಸ್ತಾಪಿಸಲಾಗಿದ್ದು, ನಗರಾಭಿವೃದ್ಧಿ ಪ್ರಾಧಿಕಾರದ ಭಾಗಗಳಿಗೂ ಏಕೆ ಪರಿಗಣಿಸಲಾಗಿಲ್ಲವೆಂದು ಶ್ರೀ ಲಕ್ಷ್ಮಣ್, ಸಂಚಾಲಕರು, ಎ.ಸಿ.ಐ.ಸಿ.ಎಂ. ಇವರು ತಿಳಿಸಿದರು. ಪಾಲಿಕೆ ವ್ಯಾಪ್ತಿಯಲ್ಲಿಯ ಹೊರ ಭಾಗಗಳಿಗೆ ನೀರು ಸರಬರಾಜು ಸಂಬಂಧಿಸಿದಂತೆ, ಸರಿಯಾಗಿ ಚಿತ್ರಣ | 24 x 7 ನೀರು ಸರಬರಾಜು ವ್ಯವಸ್ಥೆಯನ್ನು ಮೈಸೂರು ನಗರ ಪಾಲಿಕೆ ಭಾಗಗಳಿಗೆ ಪ್ರಸ್ತಾಪಿಸಲಾಗಿದ್ದು, ನಗರಾಭಿವೃದ್ಧಿ ಪ್ರಾಧಿಕಾರದ ಭಾಗಗಳಿಗೂ ಏಕೆ ಪರಿಗಣಿಸಲಾಗಿಲ್ಲವೆಂದು ಶ್ರೀ ಲಕ್ಷ್ಮಣ್, ಸಂಚಾಲಕರು, ಎ.ಸಿ.ಐ.ಸಿ.ಎಂ. ಇವರು ತಿಳಿಸಿದರು. ಪಾಲಿಕೆ ವ್ಯಾಪ್ತಿಯಲ್ಲಿಯ ಹೊರ ಭಾಗಗಳಿಗೆ ನೀರು ಸರಬರಾಜು ಸಂಬಂಧಿಸಿದಂತೆ, ಸರಿಯಾಗಿ ಚಿತ್ರಣ ದೊರಕುತ್ತಿಲ್ಲವೆಂದು ಅವರು ತಿಳಿಸಿದರು.<br>ಇದಕ್ಕೆ ಉತ್ತರವಾಗಿ, ಪಾಲಿಕೆ ವ್ಯಾಪ್ತಿಯ ಹೊರ ಪ್ರದೇಶಗಳಿಗೆ ನೀರು ಸರಬರಾಜಿಗೆ ಸಂಬಂಧಿಸಿದಂತೆ, ಸರ್ಕಾರದ ಮಟ್ಟದಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಚರ್ಚಿಸಲಾಗಿದ್ದು, ಇದಕ್ಕೆ | |

| ಕ್ರ. ಸಂ. | ಯೋಜನೆಯ ಹೆಸರು | ಹಿಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳು/ವಿಮರ್ಶೆ | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | ಭಾಗಶ:<br><br>ಮುಕ್ತಾಯವಾಗಬೇಕಾದುದು: Jan-2013 | ದೊರಕುತ್ತಿಲ್ಲವೆಂದು ಅವರು ತಿಳಿಸಿದರು.<br><br>ಇದಕ್ಕೆ ಉತ್ತರವಾಗಿ, ಪಾಲಿಕೆ ವ್ಯಾಪ್ತಿಯ ಹೊರ ಪ್ರದೇಶಗಳಿಗೆ ನೀರು ಸರಬರಾಜಿಗೆ ಸಂಬಂಧಿಸಿದಂತೆ, ಸರ್ಕಾರದ ಮಟ್ಟದಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಚರ್ಚಿಸಲಾಗಿದ್ದು, ಇದಕ್ಕೆ ಸಂಬಂಧಿಸಿದಂತೆ, ಸಮಗ್ರ ಯೋಜನಾ ವರದಿಯನ್ನು ತಯಾರಿಸಲು ಸೂಚಿಸಲಾಗಿದೆಯೆಂದು ಆಯುಕ್ತರು ತಿಳಿಸಿದರು.<br><br>ಮೆ॥ ಸ್ಟೂಪ್ ಕನ್ಸಲ್ಟೆಂಟ್ ಇವರ ಮೂಲಕ ಯೋಜನಾ ವರದಿ ತಯಾರಿಸಲಾಗುತ್ತಿದ್ದು, ಯೋಜನೆಯನ್ನು ನರ್ಮ್ ಅಡಿಯಲ್ಲಿ ಕೈಗೆತ್ತಿಕೊಳ್ಳುವುದಾಗಿ ತಿಳಿಸಿದರು.<br><br>ಪೈಪ್‌ಲೈನ್ ಅಳವಡಿಕೆಯನ್ನು 25 ಲಕ್ಷಗಳ ಜನಸಂಖ್ಯೆಗೆ ಅನುಗುಣವಾಗಿ ಪರಿಗಣಿಸಲಾಗಿದ್ದು, ಪಾಲಿಕೆ ವ್ಯಾಪ್ತಿಯ ಹೊರ ಭಾಗಗಳಿಗೆ ನೀರನ್ನು ಪೂರೈಸುವುದರ ಬಗ್ಗೆ ಶ್ರೀ ಲಕ್ಷ್ಮಣ್, ಸಂಚಾಲಕರು, ಎ.ಸಿ.ಐ.ಸಿ.ಎಂ. ಇವರು ವಿವರ ಕೋರಿದರು.<br><br>400 ಎಂ.ಎಲ್.ಡಿ ನೀರನ್ನು ಪಂಪ್ ಮಾಡಲಾಗುತ್ತಿದ್ದು, ಇದು 30 ಲಕ್ಷ ಜನಸಂಖ್ಯೆಗೆ ಸಾಕಾಗುವುದೆಂದು ಕಾರ್ಯಪಾಲಕ ಇಂಜಿನಿಯರ್‌ರವರು ತಿಳಿಸಿದರು.<br><br>ಜಸ್ಕೋ ಪ್ರತಿನಿಧಿಗಳು ಅವರ ಚಟುವಟಿಕೆಗಳ ಬಗ್ಗೆ ವಿವರ ನೀಡಿದರು. ಭೌಗೋಳಿಕ ಸರ್ವೆ ಪ್ರಗತಿಯಲ್ಲಿದ್ದು, ಅದನ್ನು ಸೆಪ್ಟೆಂಬರ್‌ನಲ್ಲಿ ಪೂರ್ಣಗೊಳಿಸುವುದಾಗಿ ತಿಳಿಸಿದರು. ಮನೆ ಮನೆ ಸರ್ವೆ ಕಾರ್ಯ ಸಹ ಪ್ರಗತಿಯಲ್ಲಿರುವುದಾಗಿ ತಿಳಿಸಿದರು. | ಸಂಬಂಧಿಸಿದಂತೆ, ಸಮಗ್ರ ಯೋಜನಾ ವರದಿಯನ್ನು ತಯಾರಿಸಲು ಸೂಚಿಸಲಾಗಿದೆಯೆಂದು ಆಯುಕ್ತರು ತಿಳಿಸಿದರು.<br><br>ಮೆ॥ ಸ್ಟೂಪ್ ಕನ್ಸಲ್ಟೆಂಟ್ ಇವರ ಮೂಲಕ ಯೋಜನಾ ವರದಿ ತಯಾರಿಸಲಾಗುತ್ತಿದ್ದು, ಯೋಜನೆಯನ್ನು ನರ್ಮ್ ಅಡಿಯಲ್ಲಿ ಪ್ರಸ್ತಾಪಿಸುವುದಾಗಿ ತಿಳಿಸಿದರು.<br><br>ನೀರು ಸರಬರಾಜು ವಿಷಯವನ್ನು ಸುದೀರ್ಘವಾಗಿ ಚರ್ಚಿಸಲು ಅನುಕೂಲವಾಗುವಂತೆ, ಮಾನ್ಯ ಮಹಾಪೌರರ ಅಧ್ಯಕ್ಷತೆಯಲ್ಲಿ ಎಲ್ಲಾ ನಗರ ಪಾಲಿಕೆ ಸದಸ್ಯರುಗಳೊಂದಿಗೆ ಒಂದು ಪ್ರತ್ಯೇಕ ಸಭೆಯನ್ನು ನಡೆಸಲು ನಿರ್ಧರಿಸಲಾಯಿತು. ಸದರಿ ವಿಷಯದ ಬಗ್ಗೆ ಎಲ್ಲಾ ಮಾಹಿತಿಗಳೊಂದಿಗೆ ಸಭೆಯನ್ನು ನಡೆಸಲು ಒಂದು ಸೂಕ್ತ ದಿನಾಂಕವನ್ನು ನಿಗಧಿಪಡಿಸುವಂತೆ ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರಿಗೆ ಸೂಚಿಸಲಾಯಿತು. | |
| **4** | ಮೈಸೂರು ನಗರಕ್ಕೆ ಸಗಟು ನೀರು ಸರಬರಾಜನ್ನು ಕಬಿನಿ ನದಿಯಿಂದ ತರುವ ಯೋಜನೆ:<br><br>ಯೋಜನೆಯ ಅಂದಾಜು ರೂ. **108.81** ಕೋಟಿ<br><br>ಮುಕ್ತಾಯವಾಗಬೇಕಾದುದು Jan-2012 | ಭೂ ಸ್ವಾಧೀನಕ್ಕೆ ಸಂಬಂಧಿಸಿದಂತೆ, ಪ್ರಕರಣಗಳು ಇತ್ಯರ್ಥವಾಗಿರುವುದಾಗಿ ಕಾರ್ಯಪಾಲಕ ಇಂಜಿನಿಯರ್‌ರವರು ತಿಳಿಸಿದರು.<br><br>ಕೆಂಬಾಳು ಮತ್ತು ಬಿದರಗೂಡು ಇಲ್ಲಿಯ ಖಾಸಗಿ ಜಮೀನುಗಳು ಹಸ್ತಾಂತರಿಸಲಾಗಿದ್ದು, ಮತ್ತು ಉದ್ಬೂರಿನಲ್ಲಿ **1/2** ಎಕರೆ ಪ್ರದೇಶವನ್ನು ಇಲಾಖೆಗೆ ಹಸ್ತಾಂತರಿಸಿರುವುದಾಗಿ ತಿಳಿಸಿದರು. | ಟೆಂಡರ್ ಅಂತಿಮಗೊಳಿಸಲು ಬೋರ್ಡ್ ಸಭೆಯನ್ನು ದಿನಾಂಕ: **20.08.2009** ರಂದು ಬೆಂಗಳೂರಿನಲ್ಲಿ ನಿಗಧಿಗೊಳಿಸಿರುವುದಾಗಿ ಕಾರ್ಯಪಾಲಕ ಇಂಜಿನಿಯರ್ ತಿಳಿಸಿದರು. | |

| ಕ್ರ. ಸಂ. | ಯೋಜನೆಯ ಹೆಸರು | ಹಿಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳು/ವಿಮರ್ಶೆ | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | ಬೋಗಾದಿ ಹತ್ತಿರದ ಭೂಮಿಗೆ ಸಂಬಂಧಿಸಿದಂತೆ, ಸದರಿ ಭೂಮಿಯು ಪಾರ್ಕ್ ಮಿತಿಯಲ್ಲಿದ್ದು, ಇದನ್ನು ವಶಕ್ಕೆ ನೀಡಲು ಮೂಡಾ ಆಯುಕ್ತರು ಒಪ್ಪಿರುತ್ತಾರೆಂದು ಕಾರ್ಯಪಾಲಕ ಇಂಜಿನಿಯರ್‌ರವರು ತಿಳಿಸಿದರು.<br>ಸರ್ಕಾರಿ ಭೂಮಿಯ ಸ್ವಾಧೀನಕ್ಕೆ ಸಂಬಂಧಿಸಿದಂತೆ, ಪ್ರಸ್ತಾವನೆಯನ್ನು ಕಂದಾಯ ಕಾರ್ಯದರ್ಶಿಗಳಿಗೆ ಸಲ್ಲಿಸಿರುವುದಾಗಿ ತಿಳಿಸಿದರು.<br>ಆಗಸ್ಟ್ 15ರೊಳಗೆ ಕಾಮಗಾರಿಗಳನ್ನು ಪ್ರಾರಂಭಿಸುವುದಾಗಿ ಕಾರ್ಯಪಾಲಕ ಇಂಜಿನಿಯರ್‌ರವರು ತಿಳಿಸಿರುತ್ತಾರೆ. | | |
| **5** | **ಮೈಸೂರು ನಗರದ 20 ಆಯ್ದ ಕೊಳಚೆ ಪ್ರದೇಶಗಳ ಪುನರ್ ವಸತಿ ಯೋಜನೆ: ಅಂದಾಜು ವೆಚ್ಚ: ರೂ. 45.27 ಕೋಟಿಗಳು.**<br>ಹಂತ–೧<br>ಮುಕ್ತಾಯವಾಗಬೇಕಾದುದು Jun-2010 | ನರ್ಮ್ ಅಡಿಯಲ್ಲಿ ಕೈಗೊಳ್ಳುವ ಮನೆಗಳಿಗೆ ಕೊಳವೆ ಬಾವಿ ನೀರು ಸರಬರಾಜು ಬದಲು ಪೈಪ್ ಮುಖಾಂತರ ನೀರು ಸರಬರಾಜು ಮಾಡುವಂತೆ ಸೂಚನೆಯಿರುವುದನ್ನು ಶ್ರೀ ಲಕ್ಷ್ಮಣ್, ಸಂಚಾಲಕರು, ಎ.ಸಿ.ಐ.ಸಿ.ಎಂ ರವರು ಸಭೆಯ ಗಮನಕ್ಕೆ ತಂದಿರುತ್ತಾರೆ.<br>ಆರ್‌ಎಂಸಿ ಯಾರ್ಡ್‌ಎ.ಬಿ.ಸಿ ಬ್ಲಾಕ್‌ಗಳಲ್ಲಿ ಎ ಬ್ಲಾಕ್‌ನಲ್ಲಿ ಮಾತ್ರ ಕೆಲಸ ಪ್ರಾರಂಭವಾಗಿದ್ದು, ಉಳಿದ ಬಿ ಮತ್ತು ಸಿ ಬ್ಲಾಕ್‌ನಲ್ಲಿರುವ ಗುಡಿಸಲುಗಳನ್ನು ಖಾಲಿ ಮಾಡಿಸಬೇಕಾಗಿರುತ್ತದೆಂದು ತಿಳಿಸಲಾಯಿತು.<br>ಎಲ್ಲಾ ವಸತಿ ಯೋಜನೆಗಳ ನಿವೇಶನದ ಸುತ್ತಾ ಅತಿಕ್ರಮಣವನ್ನು ತಡೆಯಲು ಮುಳ್ಳುತಂತಿ ಬೇಲಿಯನ್ನು ಅಳವಡಿಸಲು ಗುತ್ತಿಗೆದಾರರು ಸಭೆಗೆ ತಿಳಿಸಲಾಗಿ ಇದರಂತೆ ಪ್ರಸ್ತಾವನೆಯನ್ನು ಸಲ್ಲಿಸಲು ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು ರವರು ಕೊಳಚೆ ನಿರ್ಮೂಲನಾ ಮಂಡಳಿಯವರಿಗೆ ತಿಳಿಸಿದರು. | 2009 ಆಗಸ್ಟ್ ತಿಂಗಳ 15ರ ಅಂತ್ಯಕ್ಕೆ ನಿಗಧಿಪಡಿಸಿದ್ದ ಗುರಿಯಾದ ರೂ. 17.70 ಕೋಟಿಗಳ ಎದುರಾಗಿ ರೂ. 17.92 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆ.ಎಸ್.ಸಿ.ಬಿ ಇವರು ತಿಳಿಸಿದರು.<br>ಸ್ಲಂ ಯೋಜನೆ ಅಡಿಯಲ್ಲಿ ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಅಳವಡಿಸಲಾಗುತ್ತಿರುವ ಮಾನದಂಡದ ಬಗ್ಗೆ ನಗರ ಪಾಲಿಕೆ ಸದಸ್ಯರು ವಿವರಣೆ ಕೋರಿದರು. ಮತ್ತು ಫಲಾನುಭವಿಗಳನ್ನು ಆಯಾ ಸ್ಥಳೀಯ ನಗರ ಪಾಲಿಕೆ ಸದಸ್ಯರುಗಳೊಂದಿಗೆ ಚರ್ಚಿಸಿ ಗುರುತಿಸಲು ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದರು.<br>ಸದರಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲು ಮಾನ್ಯ ಮಹಾಪೌರರ ಅಧ್ಯಕ್ಷತೆಯಲ್ಲಿ ಎಲ್ಲಾ ನಗರ ಪಾಲಿಕೆ ಸದಸ್ಯರೊಡನೆ ಒಂದು ಪ್ರತ್ಯೇಕ ಸಭೆಯನ್ನು ನಡೆಸಲು ನಿರ್ಧರಿಸಲಾಯಿತು. ಎಲ್ಲಾ ಮಾಹಿತಿಗಳೊಂದಿಗೆ ಸಭೆಯನ್ನು ನಡೆಸಲು ಒಂದು ಸೂಕ್ತ ದಿನಾಂಕವನ್ನು ನಿಗಧಿಪಡಿಸುವಂತೆ | |

| ಕ್ರ. ಸಂ. | ಯೋಜನೆಯ ಹೆಸರು | ಹಿಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳು/ವಿಮರ್ಶೆ | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | | ಕಾರ್ಯಪಾಲಕ ಇಂಜಿನಿಯರ್, ಕೆ.ಎಸ್.ಸಿ.ಬಿ ಇವರಿಗೆ ಸೂಚಿಸಲಾಯಿತು. | |
| **6** | **ಆಯ್ದ ಮೈಸೂರು ನಗರದ 46 ಕೊಳಚೆ ಪ್ರದೇಶಗಳ ಪುನರ್ವಸತಿ ಯೋಜನೆ ಅಂದಾಜು ಮೊತ್ತ: ರೂ. 90.93 ಕೋಟಿಗಳು.** ಹಂತ–೨ ಮುಕ್ತಾಯವಾಗಬೇಕಾದುದು Apr-2011 | ದೀರ್ಘ ಚರ್ಚೆಯ ನಂತರ ಪ್ರಗತಿ ಕುಂಠಿತವಾಗಿರುವುದಕ್ಕೆ ನಿವೇಶನದ ಲಭ್ಯತೆಯಿಲ್ಲದಿರುವುದು ಪ್ರಮುಖ ಕಾರಣ ಕಂಡು ಬಂದಿದ್ದು, ಇದನ್ನು ಕಾರ್ಯಪಾಲಕ ಇಂಜಿನಿಯರ್‌ರವರು ಸಂಬಂಧಪಟ್ಟ ಇಲಾಖೆಗಳನ್ನು ಸಂಪರ್ಕಿಸಿ ಸೂಕ್ತ ಕ್ರಮ ಕೈಗೊಳ್ಳಲು ಮತ್ತು ಅಡಚಣೆಗಳನ್ನು 15 ದಿನಗಳೊಳಗಾಗಿ ಬಗೆಹರಿಸಿಕೊಳ್ಳಲು ಸೂಚಿಸಲಾಯಿತು. ತಪ್ಪಿದ್ದಲ್ಲಿ ಕಾರ್ಯಪಾಲಕ ಇಂಜಿನಿಯರ್‌ರವರ ವಿಫಲತೆಯ ಬಗ್ಗೆ ಸರ್ಕಾರಕ್ಕೆ ವರದಿ ಮಾಡಲಾಗುವುದು ಮತ್ತು ಶಿಸ್ತಿನ ಕ್ರಮ ಜರುಗಿಸಲಾಗುವುದು. | **2009** ಆಗಸ್ಟ್ ತಿಂಗಳ **15**ರ ಅಂತ್ಯಕ್ಕೆ ನಿಗಧಿಪಡಿಸಿದ್ದ ಗುರಿಯಾದ ರೂ. **4.12** ಕೋಟಿಗಳ ಎದುರಾಗಿ ರೂ. **4.21** ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆ.ಎಸ್.ಸಿ.ಬಿ ಇವರು ತಿಳಿಸಿದರು.<br><br>ಮೇದರ್ ಬ್ಲಾಕ್‌ನಲ್ಲಿ ಸ್ಲಂಗಳು ರೈಲ್ವೆ ಲೈನ್ ಪಕ್ಕದಲ್ಲಿ ಇರುವುದರಿಂದ ಅದನ್ನು ಹತ್ತಿರದ ಕಾವೇರಿ ನಗರದ ಜಾಗದಲ್ಲಿ ಸ್ಥಳಾಂತರಿಸಲು ಉದ್ದೇಶಿಸಿರುವುದಾಗಿ ಕಾರ್ಯಪಾಲಕ ಇಂಜಿನಿಯರ್, ಕೆ.ಎಸ್.ಸಿ.ಬಿ ಇವರು ತಿಳಿಸಿದರು.<br><br>ಸಭೆಯಲ್ಲಿ ಹಾಜರಿದ್ದ ರೈಲ್ವೆ ಇಲಾಖೆಯ ಪ್ರತಿನಿಧಿಗಳಿಗೆ ಕಾವೇರಿ ನಗರದ ಜಾಗವನ್ನು ಕೂಡಲೇ ನಗರ ಪಾಲಿಕೆಗೆ ನೀಡಲು ಸೂಚಿಸಲಾಯಿತು. ಮತ್ತು ಈ ಸಂಬಂಧ ಅವರ ಸಹಕಾರವನ್ನು ಕೋರಲಾಯಿತು. ಮುಂದಿನ ಸಭೆಗಳಿಗೆ ರೈಲ್ವೆ ಇಲಾಖೆಯ ಹಿರಿಯ ಅಧಿಕಾರಿಯನ್ನು ಹಾಜರಾಗುವಂತೆ ಕೋರಲು ತಿಳಿಸಲಾಯಿತು. | |
| **7** | ಏಕಲವ್ಯ ನಗರದಲ್ಲಿ ಮನೆಗಳ ನಿರ್ಮಾಣ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಯೋಜನೆ:<br>ಯೋಜನಾ ವೆಚ್ಚ.<br>ರೂ. **47.78** ಕೋಟಿಗಳು.<br>1040 ಮನೆಗಳು ಮುಕ್ತಾಯವಾಗಬೇಕಾದುದು Dec-2010 | ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಬಯೋ ಮೆಟ್ರಿಕ್ ಕಾರ್ಡ್‌ಗಳನ್ನು ನೀಡಬೇಕಾಗಿರುವುದಾಗಿ ತಿಳಿಸುತ್ತಾ, ಕಾಮಗಾರಿಯ ಟೆಂಡರ್‌ನ್ನು ಎಸ್.ಎಲ್.ಇ.ಸಿ ಗೆ ಸಲ್ಲಿಸಲಾಗಿದ್ದು, ಅನುಮೋದನೆಯ ನಿರೀಕ್ಷಣೆಯಲ್ಲಿರುವುದಾಗಿ ಕಾರ್ಯಪಾಲಕ ಇಂಜಿನಿಯರ್, ಕೊಳಚೆ ನಿರ್ಮೂಲನಾ ಮಂಡಳಿಯವರು ತಿಳಿಸಿದರು. ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು ಇವರು ಟೆಂಡರ್ ಪ್ರಕ್ರಿಯೆ ಮುಗಿಯುವುದರಲ್ಲಿ ಇತರೆ ಎಲ್ಲಾ ಪ್ರಮುಖ ದಾಖಲಾತಿಗಳನ್ನು ಪೂರ್ಣಗೊಳಿಸಲು ತಿಳಿಸಿದರು. | ಮೇದರ್ ಬ್ಲಾಕ್‌ನಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯವರು ಸೆಟ್ ಬ್ಯಾಕ್ ಬಿಡದಿರುವ ಬಗ್ಗೆ ಶ್ರೀ ಜಿ.ಕೆ. ಗೋಪಾಲ್, ಇವರು ಸಲ್ಲಿಸಿರುವ ಮನವಿಗೆ ಸಂಬಂದಿಸಿದಂತೆ, ಸ್ಥಳವನ್ನು ಪರಿಶೀಲಿಸಿ, ವರದಿ ನೀಡಲು ಅಧೀಕ್ಷಕ ಇಂಜಿನಿಯರ್, ಇವರಿಗೆ ಹಿಂದಿನ ಸಭೆಯಲ್ಲಿ ಸೂಚಿಸಿದಂತೆ, ಅಧೀಕ್ಷಕ ಇಂಜಿನಿಯರ್‌ರವರು ಸ್ಥಳವನ್ನು ಪರಿವೀಕ್ಷಣೆ ಮಾಡಿರುವುದಾಗಿ ತಿಳಿಸಿದರು. ಈ ಸಂಬಂಧ ಒಂದು ವರದಿಯನ್ನು ಮನವಿದಾರರಿಗೆ ನೀಡುವಂತೆ ಅಧೀಕ್ಷಕ ಇಂಜಿನಿಯರ್ ಅವರಿಗೆ | |

| ಕ್ರ. ಸಂ. | ಯೋಜನೆಯ ಹೆಸರು | ಹಿಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳು/ವಿಮರ್ಶೆ | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | ಮೇದರ್ ಬ್ಲಾಕ್‌ನಲ್ಲಿ ಕೆಲಸ ಪ್ರಾರಂಭ ಮಾಡಿದ್ದು, ಕೊಳಚೆ ಮಂಡಳಿಯವರು ಕಟ್ಟಡದಿಂದ ಸೆಟ್‌ಬ್ಯಾಕ್ ಬಿಟ್ಟಿಲ್ಲವೆಂದು ಶ್ರೀ ಜಿ.ಕೆ.ಗೋಪಾಲ್ ಇವರು ತಿಳಿಸಿದರು. ಸ್ಥಳದ ಜಂಟೀ ಪರಿವೀಕ್ಷಣೆಯನ್ನು ಮಾಡಲು ಅಧೀಕ್ಷಕ ಇಂಜಿನಿಯರ್‌ರವರಿಗೆ ಜಿಲ್ಲಾಧಿಕಾರಿಯವರು ನಿರ್ದೇಶನ ನೀಡಿದರು.<br>ಎಲ್ಲಾ ಅನುಭವದಾರರು, ಕೊಳಚೆ ನಿರ್ಮೂಲನ ಸಂಘಗಳು ಸ್ಥಳೀಯ ಕಾರ್ಪೊರೇಟರ್ ಮತ್ತು ಸ್ಟೇಕ್ ಹೋಲ್ಡರ್ಸ್‌ಗಳನ್ನು ಮುಂದಿನ ಸಭೆಗೆ ಹಾಜರಾಗಲು ತಿಳಿಸಲು ಜಿಲ್ಲಾಧಿಕಾರಿಗಳು ನಿರ್ದೇಶಿಸಿದರು. | ಸೂಚಿಸಲಾಯಿತು. | |
| **8** | ಮೈಸೂರು ನಗರದ ಸಾರಿಗೆ ವ್ಯವಸ್ಥೆಗೆ ಮೂಲಭೂತ ಸೌಕರ್ಯ ಒದಗಿಸುವುದು.<br>ಯೋಜನಾ ವೆಚ್ಚ: ರೂ 85.25 ಕೋಟಿಗಳು.<br>ಗುತ್ತಿಗೆ ಪ್ರೀಮಿಯಂ: 17.50% ಮೇಲ್ಪಟ್ಟು (ರೂ108.59 ಕೋಟಿ)<br>ಗುತ್ತಿಗೆ ಅವಧಿ: ಮಾನ್ಸೂನ್ ಬಿಟ್ಟು 18 ತಿಂಗಳು (3 ತಿಂಗಳು ಮಾನ್ಸೂನ್ ಕಾಲ) | ನಿಗಧಿಪಡಿಸಿದ್ದ ಗುರಿಯಾದ ರೂ.37.29 ಕೋಟಿಗಳ ಎದುರಾಗಿ ರೂ.37.50 ಕೋಟಿಗಳ ಮೊತ್ತದ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿದೆ.<br>ಶ್ರೀ ನಾಗೇಂದ್ರ ನಗರಪಾಲಿಕೆ ಸದಸ್ಯರು, ಇವರು ಬಡಾವಣೆಗಳಲ್ಲಿ ಬಸ್ ಶೆಲ್ಟರ್‌ಗಳನ್ನು ನಿರ್ಮಿಸಿ ಕೊಡಲು ಕೋರಿದರು.<br>ಇದಕ್ಕೆ ಉತ್ತರವಾಗಿ ಅಧೀಕ್ಷಕ ಅಭಿಯಂತರರವರು ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಪಟ್ಟಿ ತಯಾರಿಸಿದ್ದು, ಮುಂದಿನ ಕೌನ್ಸಿಲ್ ಸಭೆಯ ಮುಂದೆ ಮಂಡಿಸಿ ಹಾಗೂ ಸಭೆಯ ನಿರ್ಧಾರದಂತೆ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದೆಂದು ತಿಳಿಸಿದರು.<br>ಈಗಾಗಲೇ ಸೂಚಿಸಿದ್ದರೂ ಸಹಾ ಮೆ// ನಾಗಾರ್ಜುನ ಕನ್ಸಸ್ಟ್ರಕ್ಷನ್ಸ್ ಕಂಪನಿ ಇವರು ಕಾಮಗಾರಿಗಳನ್ನು ನಿರಂತರವಾಗಿ 3 ಶಿಫ್ಟ್‌ಗಳಲ್ಲಿ 24 ತಾಸು ನಿರ್ವಹಿಸಲು ಯಾವುದೇ ಕ್ರಮ ತೆಗೆದುಕೊಂಡಿಲ್ಲವೆಂದು ಗಮನಕ್ಕೆ ತರಲಾಯಿತು.<br>ನಗರ ಬಸ್ ನಿಲ್ದಾಣದ ಕಾಮಗಾರಿಯನ್ನು ಗಡುವಿನೊಳಗೆ ಪೂರ್ಣಗೊಳಿಸಿ ಆಗಸ್ಟ್ 15ರೊಳಗೆ ಉದ್ಘಾಟಿಸಲು ಅನುಕೂಲವಾಗುವಂತೆ ಸೂಕ್ತ ಕ್ರಮ ಕೈಗೊಳ್ಳಲು ವಿಭಾಗೀಯ ನಿಯಂತ್ರಣಾಧಿಕಾರಿಗಳು, ಇವರಿಗೆ | **2009** ಆಗಸ್ಟ್ ತಿಂಗಳ **15**ರ ಅಂತ್ಯಕ್ಕೆ ನಿಗಧಿಪಡಿಸಿದ್ದ ಗುರಿಯಾದ ರೂ. **41.49** ಕೋಟಿಗಳ ಎದುರಾಗಿ ರೂ. **42.00** ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆ.ಎಸ್.ಆರ್.ಟಿ.ಸಿ ಇವರು ತಿಳಿಸಿದರು.<br>ದಿ: **10.09.2009**ರೊಳಗೆ ನಗರ ಬಸ್ ನಿಲ್ದಾಣವನ್ನು ಪೂರ್ಣಗೊಳಿಸಬೇಕೆಂದು ವಿಶೇಷ ಅಧಿಕಾರಿಗಳು ಸೂಚಿಸಿದರು. ಯಾವುದೇ ರೀತಿ ವಿಳಂಬವಾದಲ್ಲಿ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಹಾಗೂ ಗುತ್ತಿಗೆದಾರರನ್ನು ಹೊಣೆಗಾರರನ್ನಾಗಿ ಮಾಡಲಾಗುವುದೆಂದು ತಿಳಿಸಲಾಯಿತು.<br>ದಿ:**10.09.2009**ರೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸುವುದಾಗಿ ಕಾರ್ಯಪಾಲಕ ಇಂಜಿನಿಯರ್‌ರವರು ಭರವಸೆ ನೀಡಿದರು.<br>ಮುಂದಿನ ಸಭೆಗಳಿಗೆ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕೆ.ಎಸ್.ಆರ್.ಟಿ.ಸಿ ಅವರು ತಪ್ಪದೇ | |

| ಕ್ರ. ಸಂ. | ಯೋಜನೆಯ ಹೆಸರು | ಹಿಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳು/ವಿಮರ್ಶೆ | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | ಸೂಚಿಸಲಾಯಿತು. | ಹಾಜರಾಗಲು ಸೂಚಿಸಲಾಯಿತು.<br>ಶ್ರೀ ನಾಗೇಂದ್ರ, ನಗರ ಪಾಲಿಕೆ ಸದಸ್ಯರು, ಹಾಗೂ ಇತರೆ ನಗರ ಪಾಲಿಕೆ ಸದಸ್ಯರು, ನರ್ಮ್ ಅಡಿಯಲ್ಲಿ ನಗರದ ಎಲ್ಲಾ ಭಾಗಗಳಲ್ಲಿ ಬಸ್ ಶೆಲ್ಟರ್‌ಗಳನ್ನು ನಿರ್ಮಿಸುವಂತೆ ಕೋರಿದರು.<br>ವಿಶ್ವಬ್ಯಾಂಕ್ ಅಡಿಯಲ್ಲಿ ವಿಶೇಷ ಅನುದಾನದಿಂದ 71 ಬಸ್ ಶೆಲ್ಟರ್‌ಗಳನ್ನು ನಿರ್ಮಿಸಲು ಗುರುತಿಸಲಾಗಿದ್ದು, ಪೂಜ್ಯ ಮೇಯರ್‌ರವರು ಈ ಪಟ್ಟಿಗೆ ಅನುಮೋದನೆ ನೀಡಿದ್ದು, ಘಟನೋತ್ತರ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಪಾಲಿಕೆ ಕೌನ್ಸಿಲ್ ಮುಂದೆ ಮಂಡಿಸುತ್ತಿರುವುದಾಗಿ ಅಧೀಕ್ಷಕ ಇಂಜಿನಿಯರ್, ನಗರಪಾಲಿಕೆ ಇವರು ತಿಳಿಸಿದರು. | |
| 9 | 1.ಮೈಸೂರು–ಬೆಂಗಳೂರು ರಸ್ತೆಯಿಂದ ಮೈಸೂರು–ನಂಜನಗೂಡುವರೆಗೆ 2 ಪಥದ ಹೊರ ವರ್ತುಲದ ರಸ್ತೆಯನ್ನು ಸರ್ವೀಸ್ ರಸ್ತೆಯೊಂದಿಗೆ 6 ಪಥದ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವುದು (0+0.25 ಕಿ.ಮೀ ಪಶ್ಚಿಮದ ಕಡೆಗೆ) 2. ಮೈಸೂರು–ಬೆಂಗಳೂರು ಹೊರ ವರ್ತುಲ ರಸ್ತೆಯಿಂದ– ಮೈಸೂರು ಬನ್ನೂರು ರಸ್ತೆವರೆಗೆ 4 ಪಥದ ರಸ್ತೆಯನ್ನು ಸರ್ವೀಸ್ ರಸ್ತೆಯೊಂದಿಗೆ 6 ಪಥದ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವುದು (0 ಯಿಂದ 7.49 ಕಿ.ಮೀ ಪೂರ್ವದ ಕಡೆಗೆ)<br>ಅಂದಾಜು ವೆಚ್ಚ: ರೂ. 219.03 ಕೋಟಿಗಳು.<br>ಅನುಮೋದಿಸಿದ ದಿ: 15–2–2008 | ಕಾಮಗಾರಿ ಆರ್ಥಿಕ ಬಿಡ್ಡನ್ನು ದಿನಾಂಕ: 07.07.2009 ರಂದು ತೆರೆಯಲಾಗಿದ್ದು, ಅದರ ಮೌಲ್ಯಮಾಪನ ನಡೆಯುತ್ತಿರುವುದಾಗಿ ಮೂಡಾ ಆಯುಕ್ತರು ತಿಳಿಸಿದರು.<br>ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಟೆಂಡರ್ ದಾಖಲೆಗಳನ್ನು ಮೌಲ್ಯಮಾಪನ ಮಾಡುವಲ್ಲಿ ಅಧೀಕ್ಷಕ ಇಂಜಿನಿಯರ್, ಮೂಡಾರವರಿಂದ ಅನಗತ್ಯ ವಿಳಂಬ ಆಗಿರುವುದನ್ನು ಗಮನಿಸಲಾಗಿದೆ. ಮೌಲ್ಯ ಮಾಪನವನ್ನು ತುರ್ತಾಗಿ ಚುರುಕುಗೊಳಿಸುವಂತೆ ಆಯುಕ್ತರು, ಮೂಡಾ ಇವರಿಗೆ ಕೋರಲಾಯಿತು.<br>ಇದಕ್ಕೆ ಉತ್ತರವಾಗಿ ಮೂಡಾ ಆಯುಕ್ತರು, ಪ್ರಾಮಾಣಿಕ ಪ್ರಯತ್ನ ಮಾಡಿ ಕಾಮಗಾರಿಯನ್ನು ನಿರ್ದಿಷ್ಟ ಅವಧಿಯೊಳಗೆ ಮುಗಿಸುವುದಾಗಿ ತಿಳಿಸಿದರು. | ಈ ಕುರಿತು ಶನಿವಾರದೊಳಗೆ ಟೆಂಡರನ್ನು ಸರ್ಕಾರಕ್ಕೆ ಕಳುಹಿಸಲು ಆಯುಕ್ತರಿಗೆ ಸೂಚಿಸಲಾಯಿತು. | |

| ಕ್ರ. ಸಂ. | ಯೋಜನೆಯ ಹೆಸರು | ಹಿಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳು/ವಿಮರ್ಶೆ | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| 10 | ಘನತ್ಯಾಜ್ಯ ವಸ್ತು ನಿರ್ವಹಣೆ: ಮೈಸೂರು ನಗರದಲ್ಲಿ ಸಮಗ್ರ ಮುನ್ಸಿಪಲ್ ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಪ್ಲಾಂಟ್ ಅಭಿವೃದ್ಧಿ ಪಡಿಸುವುದು.<br>ಅನುಮೋದಿತ ದಿ: 19-12-2008<br>ಯೋಜನೆಯ ಮೊತ್ತ ರೂ. 29.98 ಕೋಟಿ<br>ಮುಕ್ತಾಯವಾಗಬೇಕಾದುದು ಜೂನ್ 2010. | ಸದರಿ ಕಾಮಗಾರಿಗೆ ಸಂಬಂಧಿಸಿದಂತೆ, ಕನಿಷ್ಟ ಬಿಡ್ಡುದಾರರಾದ ಮೆ॥ ರಾಮ್ಕಿ ಎನ್ವಾರಮೆಂಟಲ್ ಇಂಜಿನಿಯರಿಂಗ್, ಇವರು ಈ ಕಛೇರಿಯಿಂದ ಕೋರಿರುವ ಅಂಶಗಳಿಂದ ಸ್ಪಷ್ಟೀಕರಣ ನೀಡಲು ಕಾಲಾವಕಾಶವನ್ನು ಕೋರಿರುತ್ತಾರೆ. ತದ ನಂತರ ಕನ್ಸಲ್ಟಂಟ್‌ರವರು ಈ ಬಗ್ಗೆ ಪ್ರಾತ್ಯಕ್ಷತೆಯನ್ನು ನೀಡಲು ಒಪ್ಪಿರುತ್ತಾರೆಯೆಂದು ಅಧೀಕ್ಷಕ ಇಂಜಿನಿಯರ್, ಮೈಸೂರು ಮಹಾನಗರ ಪಾಲಿಕೆ ಇವರು ತಿಳಿಸಿದರು. | ಚರ್ಚೆಯಾಗಿರುವುದಿಲ್ಲ. | |
| 11 | ಪ್ರವಾಸಿಗಳ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆ<br>ಮೈಸೂರು- ಪ್ಯಾಕೇಜ್ 1 | ಮೈಸೂರಿನಲ್ಲಿ ಪ್ರವಾಸೋದ್ಯಮ ಕಾಮಗಾರಿಗೆ ಸಂಬಂಧಿಸಿದಂತೆ, ಒಬ್ಬ ಪ್ರತ್ಯೇಕ ಉಪ ನಿರ್ದೇಶಕರು ಮತ್ತು ಇಂಜಿನಿಯರ್‌ರವರನ್ನು ನಿಯೋಜಿಸುವಂತೆ ಕೋರಿ ಸರ್ಕಾರಕ್ಕೆ ಪತ್ರ ಬರೆದಿರುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು. | ಪಾಲುದಾರಿಕೆ ಸಂಸ್ಥೆಯ ಜೊತೆಗೆ ನಡೆದ ಸಭೆಯ ನಂತರ 2 ಡಿಪಿಆರ್‌ಗಳನ್ನು (ಚಾಮುಂಡಿಬೆಟ್ಟ ಮತ್ತು ಹೆರಿಟೇಜ್ ಕೋರ್) ರಾಜ್ಯ ಸರ್ಕಾರದಿಂದ ಭಾರತ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಿರುವುದಾಗಿ ಪಾಲಿಕೆ ಆಯುಕ್ತರು ಸಭೆಗೆ ತಿಳಿಸಿದರು. | |
| 12 | ಮೈಸೂರುನಗರದ ಪಾರಂಪರಿಕ ಕಟ್ಟಡಗಳು ಹಾಗೂ ವೃತ್ತಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದು. | ಚರ್ಚೆಯಾಗಿರುವುದಿಲ್ಲ. | ಚರ್ಚೆಯಾಗಿರುವುದಿಲ್ಲ. | |
| 13 | ದೊಡ್ಡ ಮಳೆನೀರು ಚರಂಡಿ ಪುನರ್ ನಿರ್ಮಾಣ<br>ಅಂದಾಜು ಮೊತ್ತ: ರೂ 384.60 ಕೋಟಿಗಳು (ಸದ್ಯಕ್ಕೆ ರೂ 125.00 ಕೋಟಿಗೆ ಮಿತಿಗೊಳಿಸಲಾಗಿದೆ)<br>ಮುಕ್ತಾಯವಾಗಬೇಕಾದುದು<br>ಡಿಸೆಂಬರ್ 2010. | ಕಾಮಗಾರಿಗಳಿಗೆ ಕಾರ್ಯಾದೇಶವನ್ನು ನೀಡಲಾಗಿದ್ದು, ಪ್ರಾಥಮಿಕ ಕೆಲಸಗಳು ಪ್ರಗತಿಯಲ್ಲಿರುವುದಾಗಿ ಅಧೀಕ್ಷಕ ಇಂಜಿನಿಯರ್, ಮೈಸೂರು ಮಹಾನಗರ ಪಾಲಿಕೆ ಇವರು ತಿಳಿಸಿದರು. | ಚರ್ಚೆಯಾಗಿರುವುದಿಲ್ಲ. | |

- ನೀರು ಸರಬರಾಜು ಯೋಜನೆ ಮತ್ತು ಕೊಳಚೆ ನಿರ್ಮೂಲನಾ ಯೋಜನೆ ಕಾಮಗಾರಿಗೆ ಸಂಬಂಧಿಸಿದಂತೆ, ವಿವರಗಳನ್ನು ಚರ್ಚಿಸಲು ಮಾನ್ಯ ಮಹಾಪೌರರ ಅಧ್ಯಕ್ಷತೆಯಲ್ಲಿ ಎಲ್ಲಾ ನಗರ ಪಾಲಿಕೆ ಸದಸ್ಯರೊಡನೆ ಒಂದು ಪ್ರತ್ಯೇಕ ಸಭೆಯನ್ನು ಏರ್ಪಡಿಸುವಂತೆ ಸೂಚಿಸಲಾಯಿತು.
- ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಆರ್.ಟಿ.ಸಿ ಮತ್ತು ಆಯುಕ್ತರು, ಕೊಳಚೆ ನಿರ್ಮೂಲನಾ ಮಂಡಳಿ ಇವರನ್ನು ಪ್ರಗತಿ ಪರಿಶೀಲನಾ ಸಭೆಗೆ ಆಹ್ವಾನಿಸಲು ಸೂಚಿಸಲಾಯಿತು.
- ನರ್ಮ್ ಯೋಜನೆಗೆ ಸಂಬಂಧಿಸಿದಂತೆ, ಎಲ್ಲಾ ಅಧಿಕಾರಿಗಳು ಮಾನ್ಯ ವಿಶೇಷ ಅಧಿಕಾರಿಗಳೊಂದಿಗೆ ಪ್ರತಿ ದಿನ ಟೆಲಿ ಕಾನ್‌ಫರೆನ್ಸ್ ಮೂಲಕ ಸಂಪರ್ಕಿಸಿ, ಪ್ರಗತಿಯ ಬಗ್ಗೆ ವಿವರ ನೀಡಲು ತಿಳಿಸಲಾಯಿತು.

ಜಿಲ್ಲಾಧಿಕಾರಿಗಳು ಮತ್ತು ವಿಶೇಷಾಧಿಕಾರಿಗಳು
ಜವಹರಲಾಲ್ ನೆಹರು ರಾಷ್ಟ್ರೀಯ ಪುನರುಜ್ಜೀವನ ಯೋಜನೆ,
ಮೈಸೂರು.

ಪ್ರತಿಯನ್ನು ಕೆಳಕಂಡವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ:

1. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಮಾನ್ಯ ಸಚಿವರ ಗಮನಕ್ಕೆ ತರುವಂತೆ ಕೋರಿದೆ.
2. ಮಾನ್ಯ ಮುಖ್ಯ ಮಂತ್ರಿಗಳ ಸಂಸದೀಯ ಕಾರ್ಯದರ್ಶಿ ಹಾಗೂ ವಿದಾನಸಭೆಯ ಸದಸ್ಯರು, ಕೃಷ್ಣರಾಜ ಕ್ಷೇತ್ರ, ಮೈಸೂರು.
3. ಮಾನ್ಯ ಲೋಕಸಭಾ ಸದಸ್ಯರು, ಮೈಸೂರು ಕ್ಷೇತ್ರ, ಮೈಸೂರು.
4. ಮಾನ್ಯ ವಿಧಾನಸಭಾ ಸದಸ್ಯರು, ಚಾಮರಾಜ ಕ್ಷೇತ್ರ, ಮೈಸೂರು.
5. ಮಾನ್ಯ ವಿಧಾನಸಭಾ ಸದಸ್ಯರು, ನರಸಿಂಹರಾಜ ಕ್ಷೇತ್ರ, ಮೈಸೂರು.
6. ಮಾನ್ಯ, ವಿಧಾನಸಭಾ ಸದಸ್ಯರು, ಚಾಮುಂಡೇಶ್ವರಿ ಕ್ಷೇತ್ರ, ಮೈಸೂರು.
7. ಮಾನ್ಯ ಮಹಾಪೌರರು, ಮೈಸೂರು ನಗರಪಾಲಿಕೆ, ಮೈಸೂರು.
8. ಮಾನ್ಯ ಉಪ ಮಹಾ ಪೌರರು, ಮೈಸೂರು ನಗರಪಾಲಿಕೆ, ಮೈಸೂರು.
9. ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ದಿ ಇಲಾಖೆ, ಕರ್ನಾಟಕ ಸರ್ಕಾರ 4ನೇ ಮಹಡಿ, ವಿಕಾಸಸೌಧ, ಬೆಂಗಳೂರು.
10. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, 4ನೇ ಮಹಡಿ, ವಿಕಾಸ ಸೌಧ, ಬೆಂಗಳೂರು.
11. ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು.
12. ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ. ಸಿಲ್ವರ್ ಜ್ಯುಬಲಿ ಬ್ಲಾಕ್, 2ನೇ ಮಹಡಿ, Unity ಕಟ್ಟಡ, 3ನೇ ಅಡ್ಡರಸ್ತೆ, ಮಿಷನ್ ರಸ್ತೆ, ಬೆಂಗಳೂರು.
13. ವ್ಯವಸ್ಥಾಪಕ ನಿರ್ದೇಶಕರು, ಕೆ,ಯು,ಡಬ್ಲ್ಯೂ.ಎಸ್, ಮತ್ತು ಡಿ.ಬಿ., ನಂ. 6, ಜಲಭವನ, 1ನೇ ಹಂತ, 1ನೇ ಸ್ಟೇಜ್, ಬಿ.ಟಿ.ಎಂ. ಬಡಾವಣೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು 560029.
14. ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ರ.ಸಾ.ನಿ., ಕೆಂಗಲ್ ಹನುಮಂತಯ್ಯ ಜೋಡಿ ರಸ್ತೆ, ಶಾಂತಿನಗರ, ಬೆಂಗಳೂರು.
15. ಆಯುಕ್ತರು, ಪಾರಾಂಪರಿಕ ಇಲಾಖೆ, ಅರ್ಕ್ಯಾಲಜಿ ಮ್ಯೂಸಿಯಂ ಮತ್ತು ಪಾರಂಪರಿಕ, ವೆಂಕಟಪ್ಪ ಆರ್ಟ್ ಗ್ಯಾಲರಿ, ಕಸ್ತೂರ್ಬಾ ರಸ್ತೆ, ಬೆಂಗಳೂರು.19.
16. ಆಯುಕ್ತರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ,ಬೆಂಗಳೂರು – 1.

II ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

1. ಆಯುಕ್ತರು, ಮೈಸೂರು ನಗರಪಾಲಿಕೆ, ಮೈಸೂರು.
2. ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
3. ಆಯುಕ್ತರು, ಕೊಳಚೆ ನಿರ್ಮೂಲನ ಮಂಡಳಿ, ಶೇಷಾದ್ರಿಪುರಂ, ಬೆಂಗಳೂರು.
4. ಉಪ ವಿಭಾಗಾಧಿಕಾರಿಗಳು, ಮೈಸೂರು.
5. ಅಧೀಕ್ಷಕ ಇಂಜಿನಿಯರ್, ಮೈಸೂರು ನಗರಪಾಲಿಕೆ, ಮೈಸೂರು.
6. ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿ., ಮೈಸೂರು.
7. ಕಾರ್ಯಪಾಲಕ ಇಂಜಿನಿಯರ್, ಕೆ,ಯು,ಡಬ್ಲ್ಯೂ.ಎಸ್, ಮತ್ತು ಡಿ.ಬಿ., ನಗರವಿಭಾಗ (ಜೆಎನ್ ನರ್ಮ್) ಯಾದವಗಿರಿ, ಮೈಸೂರು.
8. ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಮೈಸೂರು.
9. ಕಾರ್ಯಪಾಲಕ ಇಂಜಿನಿಯರ್, ಕ.ರಾ.ರ.ಸಾ.ನಿ.,, ಮೈಸೂರು ಗ್ರಾಮಾಂತರ ವಿಭಾಗ, ಬನ್ನಿಮಂಟಪ, ಮೈಸೂರು.
10. ಉಪ ನಿರ್ದೇಶಕರು, ಪಾರಂಪರಿಕ ಇಲಾಖೆ, ಮೈಸೂರು.
11. ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಮೈಸೂರು.

ಜಿಲ್ಲಾಧಿಕಾರಿಗಳು ಮತ್ತು ವಿಶೇಷಾಧಿಕಾರಿಗಳು
ಜವಹರಲಾಲ್ ನೆಹರು ರಾಷ್ಟ್ರೀಯ ಪುನರುಜ್ಜೀವನ ಯೋಜನೆ,
ಮೈಸೂರು.